# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಾಸರಹಳ್ಳಿ ವಲಯ.

"ವಾರ್ಡ್ ಕಮಿಟಿ - ವಾರ್ಡ್ ನಂ.15ರ ಕಛೇರಿ ಕಾರ್ಯಾಲಯ"

---

ಸಂಖ್ಯೆ:ಬೃಬೆಂಮಪಾ/ದಾವ/ವಾರ್ಡ್ ನಂ.15/DETER/04/2021-22. ದಿನಾಂಕ: 05-06-2021.

ವಿಷಯ: ವಾರ್ಡ್ ನಂ.15. "ದಾಸರಹಳ್ಳಿ" ವಾರ್ಡ್ ಸಭೆಯ ನಡವಳಿ.

ಉಲ್ಲೇಖ: 1. ಸಭಾ ಸೂಚನಾ ಪತ್ರ ಬಿಬಿಎಂಪಿ/ದಾವ/2021-22, ದಿನಾಂಕ: 03-06-2021.
2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ.RD 158 TNR 2020, ದಿನಾಂಕ:07-05-2021.

<<>>

ಉಲ್ಲೇಖ(1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ(2)ರ ಆದೇಶದ ಅಂಶಗಳನ್ನು ಪರಿಶೀಲಿಸಲು **ದಿನಾಂಕ:05-06-2021ರಂದು ವಾರ್ಡ್ ನಂ.15, ಸರ್ಕಾರಿ ಪ್ರಾಥಮಿಕ ಪಾಠ ಶಾಲೆ, ಮೊದಲ ಮಹಡಿ, ನೆಲಮಹೇಶ್ವರಮ್ಮ ದೇವಸ್ಥಾನ ಹತ್ತಿರ, ನೆಲಮಹೇಶ್ವರಿ, ಟಿ.ದಾಸರಹಳ್ಳಿ, ಬೆಂಗಳೂರು-560057.ಇಲ್ಲಿ ವಾರ್ಡ್ ಸಮಿತಿ ಸಭೆಯನ್ನು ಬೆಳಗ್ಗೆ 11.00 ಗಂಟೆಗೆ ಕರೆಯಲಾಗಿದ್ದು**, ಸದರಿ ಸಭೆಯ ನಡವಳಿಗಳು.

## ಹಾಜರಿದ್ದವರು

1. ಶ್ರೀ ಕೆ.ಮಾಯಣ್ಣಗೌಡ, ಕೆ.ಎಂ.ಎ.ಎಸ್. ಉಪ ಆಯುಕ್ತರು, ದಾಸರಹಳ್ಳಿ ವಲಯ ಹಾಗೂ ನೋಡಲ್ ಅಧಿಕಾರಿ, ವಾರ್ಡ್ ನಂ.15ರ ವಾರ್ಡ್ ಕಮಿಟಿ.
2. ಶ್ರೀ ಧನಂಜಯ್ಯ, ಸಹಾಯಕ ಕಂದಾಯ ಅಧಿಕಾರಿ, ದಾಸರಹಳ್ಳಿ ಉಪ ವಿಭಾಗ.
3. ಶ್ರೀ ಗುರುಶಾಂತಪ್ಪ ಡಿ.ಸಿ. ಸದಸ್ಯರು ಕಾರ್ಯದರ್ಶಿ, ವಾರ್ಡ್ ನಂ.15.
4. ಶ್ರೀ ಶ್ರೀನಿವಾಸ್, ಕಂದಾಯ ವಸೂಲಿಗಾರರು(ವಾರ್ಡ್ ನಂ.15)
5. ಶ್ರೀ ನರೇಶ್, ಕಂದಾಯ ವಸೂಲಿಗಾರರು(ವಾರ್ಡ್ ನಂ.15)
6. ಶ್ರೀ ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು(ವಾರ್ಡ್ ನಂ.15)
7. ಶ್ರೀಮತಿ ಚೈತ್ರ, ಕಿರಿಯ ಆರೋಗ್ಯ ಪರಿವೀಕ್ಷಕರು(ವಾರ್ಡ್ ನಂ.15)
8. ಶ್ರೀಮತಿ ಶಾಮಲ ಮತ್ತು ಪವಿತ್ರ, ಲಿಂಕ್‌ವರ್ಕರ್ಸ್(ವಾರ್ಡ್ ನಂ.15)
9. ಶ್ರೀ ಬಿಲಾಲ್ ಅಹಮ್ಮದ್, ನೋಡಲ್ ಅಧಿಕಾರಿ,(ಹೋ-ಐಸೋಲೇಷನ್)
10. ಶ್ರೀ ವಿಜಯ್‌ಕುಮಾರ್ ಜೆ. ಮಾರ್ಷಲ್(ವಾರ್ಡ್ ನಂ.15)

ಶ್ರೀ ಗುರುಶಾಂತಪ್ಪ ಡಿ.ಸಿ., ಸದಸ್ಯ ಕಾರ್ಯದರ್ಶಿಗಳು, ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

--ಪು.ತಿ.ನೋ--

Scanned with CamScanner

ಶ್ರೀ ಕೆ.ಮಾಯಣ್ಣಗೌಡ, ಉಪ ಆಯುಕ್ತರು, ದಾಸರಹಳ್ಳಿ ವಲಯ ಹಾಗೂ ನೋಡಲ್ ಅಧಿಕಾರಿ, ವಾರ್ಡ್ ನಂ.15ರ ವಾರ್ಡ್ ಸಮಿತಿ ರವರು ಮಾತನಾಡುತ್ತಾ, ಉಲ್ಲೇಖ(2)ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ.15ರಲ್ಲಿ "Ward Decentralized Triage and Emergency Response (DETER)" Committee for Covid-19 Management (WDC)ಯ ಸಮಿತಿ " ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ"ದ ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

ಮುಂದುವರೆದಂತೆ **ವಾರ್ಡ್ ನಂ.15, ಸರ್ಕಾರಿ ಪ್ರಾಥಮಿಕ ಪಾಠ ಶಾಲೆ, ಮೊದಲ ಮಹಡಿ, ನೆಲಮಹೇಶ್ವರಮ್ಮ ದೇಮಸ್ಥಾನ ಹತ್ತಿರ, ನೆಲಮಹೇಶ್ವರಿ, ಟಿ.ದಾಸರಹಳ್ಳಿ, ಬೆಂಗಳೂರು-560057.ರಲ್ಲಿ** ತುರ್ತು ಪ್ರತಿಕ್ರಿಯೆ ಕೇಂದ್ರ ನಡೆಸಲು ಅಗತ್ಯವಾಗಿ ಬೇಕಾಗಿರುವಂತಹ ಸಲಕರಣೆಗಳನ್ನು ಒದಗಿಸಲಾಗಿದ್ದು, ಜನ ಸಾಮಾನ್ಯರಿಗೆ ಅಗತ್ಯ ಸಂದರ್ಭದಲ್ಲಿ ವೈದ್ಯಕೀಯ ಸೇವೆಯನ್ನು ನೀಡಲು ನಾಲ್ಕು ಹಾಸಿಗೆಗಳ ಚಿಕಿತ್ಸೆ ಕೇಂದ್ರವನ್ನು ಈಗಾಗಲೇ ಎರಡು ಆಮ್ಲಜನಕ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಸದರಿ ಕೇಂದ್ರದಲ್ಲಿ ಮೊದಲನೇ ಹಂತದ ತುರ್ತು ಪ್ರತಿಕ್ರಿಯೆ ಕೇಂದ್ರ ಸ್ಥಾಪಿಸಲಾಗಿದ್ದು, ಈ ಕೇಂದ್ರದಲ್ಲಿ ಬರುವಂತಹ ವ್ಯಕ್ತಿಯ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಅವರಿಗೆ ಅಗತ್ಯಕ್ಕೆ ತಕ್ಕಂತೆ ವೈದ್ಯಕೀಯ ಸೌಲಭ್ಯದೊಂದಿಗೆ ಪ್ರಾಥಮಿಕ ಹಂತದ ಚಿಕಿತ್ಸೆ ನೀಡಲು ವೈದ್ಯರು ಹಾಗೂ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿರುತ್ತದೆ ಮುಂದಿನ ದಿನಗಳಲ್ಲಿ ಕೋವಿಡ್-19 ಮೂರನೇ ಅಲೆ ಎದುರಿಸಲು ಸಾರ್ವಜನಿಕರಿಗೆ ಮಾಹಿತಿ ನೀಡಿ ಮುಂದಿನ ದಿನಗಳಲ್ಲಿ ಕೋವಿಡ್-19 ತಡೆಗಟ್ಟಲು ತುರ್ತು ಪ್ರತಿಕ್ರಿಯೆ ಕೇಂದ್ರವನ್ನು ಅಭಿವೃದ್ಧಿ ಪಡಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

**ಡಾ॥ ಹೃದಯ** ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಈಗಾಗಲೇ ಸುಮಾರು 85 ವ್ಯಕ್ತಿಗಳಿಗೆ ಚಿಕಿತ್ಸೆ ನೀಡಿ ಅಗತ್ಯಕ್ಕೆ ತಕ್ಕಂತೆ ಬೇರೆ ಬೇರೆ ಆಸ್ಪತ್ರೆಗಳಿಗೆ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಡಲು ವ್ಯವಸ್ಥೆ ಮಾಡಲಾಗಿರುತ್ತದೆ. ದಿನ ನಿತ್ಯ 3 ರಿಂದ 4 ಪ್ರಕರಣಗಳು ತುರ್ತು ಪ್ರತಿಕ್ರಿಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, 18 ರಿಂದ 44 ವಯಸ್ಸಿನ ವ್ಯಕ್ತಿಗಳು ಕೇಂದ್ರಕ್ಕೆ ಭೇಟಿ ನೀಡುತ್ತಿದ್ದಾರೆ, ಸದರಿ ಕೇಂದ್ರವು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ ಎಂಬ ಮಾಹಿತಿಯನ್ನು ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿ ನೌಕರರುಗಳಿಗೆ ತಿಳಿಸಿದರು. ಹಾಜರಿದ್ದ ತುರ್ತು ಪ್ರತಿಕ್ರಿಯೆ ಕೇಂದ್ರದ ವೈದ್ಯರು ಸದರಿ ಕೇಂದ್ರದ ಉಪಯೋಗ ಹಾಗೂ ಬಳಕೆ ಬಗ್ಗೆ ಸಭೆಗೆ ವಿವರಿಸಿದರು.

**--ಮು.ತಿ.ನೋ--**

Scanned with CamScanner

ಶ್ರೀ.ಬಿಲಾಲ್ ಅಹಮ್ಮದ್, ನೋಡಲ್ ಅಧಿಕಾರಿ.(ಹೋಂ-ಐಸೋಲೇಷನ್)ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡ್ ನಂ.15, ಟಿ.ದಾಸರಹಳ್ಳಿ ವ್ಯಾಪ್ತಿಯಲ್ಲಿ ಸುಮಾರು 95 ಜನ ಹೋಂ-ಐಸೊಲೇಷನಲ್ಲಿರುವ ಮಾಹಿತಿಯನ್ನು ಸಭೆಗೆ ನೀಡಿ, ಪಾಸಿಟಿವ್ ಪ್ರಕರಣಗಳು ದಾಖಲಾಗಿರುವಂತಹ ಮನೆಗಳ ಅಕ್ಕ ಪಕ್ಕದ ನಿವಾಸಿಗಳು ಸೂಕ್ತ ಮಾಹಿತಿಯನ್ನು ನೀಡಬಹುದಾಗಿರುತ್ತದೆ ಹಾಗೂ ಔಷಧಿ ಕಿಟ್‌ಗಳನ್ನು ಪ್ರಕರಣಗಳು ದಾಖಲಾಗಿರುವ ವ್ಯಕ್ತಿಗಳಿಗೆ ತಲುಪಿಸಲುವಲ್ಲಿ ಭೂತ್ ಮಟ್ಟದ ಅಧಿಕಾರಿ/ಲಿಂಕ್‌ವರ್ಕರ್ಸ್ ಮೂಲಕ ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ.

ವಾರ್ಡ್ ನಂ.15, ಟಿ.ದಾಸರಹಳ್ಳಿ ವ್ಯಾಪ್ತಿಯಲ್ಲಿ ವಿವಿಧ ಸಮಸ್ಯೆ ಹಾಗೂ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಚರ್ಚಿಸುತ್ತಾ ಬೀದಿ ದೀಪಗಳನ್ನು ಸರಿಪಡಿಸಲು ಸಲಹೆ ಸೂಚಿಸಲಾಯಿತು, ರಾಜಗಾಲುವೆಗಳಲ್ಲಿ ಶೀಲ್ಟ್ ತೆಗೆಯಲು ಸಲಹೆ ನೀಡಲಾಯಿತು. ಮಳೆ ನೀರು ತಂಗು ಪ್ರದೇಶಗಳಿಗೆ ನುಗ್ಗುತ್ತಿದ್ದು ಸಂಬಂಧಿಸಿದ ಅಧಿಕಾರಿಗಳು ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಗುರುಶಾಂತಪ್ಪ ಡಿ.ಸಿ.)
ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ.15, ದಾಸರಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಕೆ.ಮಾಯಣ್ಣ ಗೌಡ ಕೆ.ಎ.ಎಸ್)
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಉಪ ಆಯುಕ್ತರು, ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಪ್ರತಿಯನ್ನು :**

1. ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು( ದಾ.ಉ.ವಿ), ಬಿಬಿಎಂಪಿ, ರವರ ಮಾಹಿತಿಗಾಗಿ ಕಳುಹಿಸಿದೆ.
6. ಸಹಾಯಕ ಕಂದಾಯ ಅಧಿಕಾರಿ, ದಾಸರಹಳ್ಳಿ ಉಪ ವಿಭಾಗರವರ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕೆ.

Scanned with CamScanner